ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಧ್ಯಕ್ಷರೇ, ಹೆಲ್ಡ್ ಓವರ್ ಪ್ರಶ್ನೆ ಲಾಸ್ಟ್ ಟೈಮ್ ಕೇಳಿದ್ದೆ 91–92, 92–93ನೇ ಸಾಲಿನಲ್ಲಿ ರಾಜ್ಯದ ಖಾಸಗೀ ಮೆಡಿಕಲ್ ಕಾಲೇಜ್‌ಗಳಲ್ಲಿ ಪ್ರವೇಶ ಎಷ್ಟು ಮಾಡಿದ್ದಾರೆ ? ಹೆಚ್ಚು ಮಾಡಿದ್ದಾರೋ ? ಹೆಚ್ಚು ಮಾಡಿದ್ದರೆ ಅವರಿಗೆ ಎಕ್ಸಾಮಿನೇಷನ್‌ಗೆ ಅಲೋ ಮಾಡಿದ್ದಾರೆಯೇ, ಅದಕ್ಕೆ ಉತ್ತರ ಏಕೆ ಸ್ವಾಮಿ ಬಂದಿಲ್ಲ. ಅಧ್ಯಕ್ಷರೇ, ಇದನ್ನು ಇವರು ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಇವರು ಏನು ಮಾಡುತ್ತಿದ್ದಾರೆ ಎಂದರೆ ಇಲ್‌ಲೀಗಲ್ ಆಗಿ ಯೂನಿವರ್ಸಿಟಿ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲ್ ವಿರುದ್ಧವಾಗಿ ಅವರನ್ನು ಅಡ್ಮಿಟ್ ಮಾಡಿದ್ದಾರೆ ಚೀಫ್ ಮಿನಿಸ್ಟರ್, ವೈಸ್ ಚಾನ್ಸಿಲರ್‌ಗೆ ಫೋನ್ ಮಾಡಿ ಪರೀಕ್ಷೆಯ ಹಿಂದಿನ ದಿನ ಅವರನ್ನು ಅಲೋ ಮಾಡಿ ಎಂದು ಹೇಳಿದ್ದಾರೆ ಇದನ್ನು ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಎರಡು ವಾರ ಅಸೆಂಬ್ಲಿಯಿದೆ ಎಂದು ಹೇಳಿ ಆಮೇಲೆ ರ್ಯಾಟಿಫೈ ಮಾಡುತ್ತೀರಾ. ಇದಕ್ಕೆ ಏಕೆ ಇನ್ನು ಉತ್ತರ ಬರಬೇಕು.

ಅಧ್ಯಕ್ಷರು:– ಅದಷ್ಟು ಬೇಗ ಆ ಉತ್ತರ ತರಿಸಿಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:– ಅಧ್ಯಕ್ಷರೇ, ತಾವು ನಮ್ಮ ಪ್ರೊಟೆಕ್ಷನ್‌ಗೆ ಬರಬೇಕು. ನಾವು ಇಲ್ಲಿರತಕ್ಕಂಥದ್ದು ಸರ್ಕಾರ ಮಾಡತಕ್ಕ ತಪ್ಪುಗಳನ್ನು ಹೇಳುವುದಕ್ಕೆ. ಈ ಸರ್ಕಾರ ತಪ್ಪು ಮಾಡುತ್ತಿದೆ ಎಂದು ಜನರಿಗೆ ಹೇಳಬೇಕಾಗುತ್ತದೆ. ವಿರೋಧಪಕ್ಷದಲ್ಲಿ ನಾವು ಕುಳಿತುಕೊಂಡು ಇವರು ಹೇಳಿದ್ದೆಲ್ಲಾ ಕೇಳಿಕೊಂಡು ಹೋಗುವುದಕ್ಕಲ್ಲ ಸರ್ಕಾರ ಮಾಡತಕ್ಕಂಥ ತಪ್ಪುಗಳನ್ನು ಹೇಳುವುದು ನಮ್ಮ ಕೆಲಸ. ಆದ್ದರಿಂದ ಇವರು ಉತ್ತರಕೊಡುತ್ತಾರೆಂದು ಕಾದುಕೊಂಡಿರಬೇಕೇ ? ಹೆಲ್ಡ್ ಓವರ್ ಪ್ರಶ್ನೆಗೆ ಉತ್ತರ ಇಲ್ಲ ಎಂದರೆ ಎಂತಹ ಇರ್‌ರೆಸ್ಪಾನ್ಸಿಬಲ್ ಗೌರ್ನಮೆಂಟ್ ಇದು. ತಾವು ಮುಂದಿನ ವಾರ ಕೊಡುತ್ತೇರೆಂದು ಅಶ್ಯೂರೆನ್ಸ್ ಕೊಡಿ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ ತಾರೀಖು 24.2.93ರ ಲಿಖಿತದ ಮೂಲಕ ಉತ್ತರಿಸುವ 6ನೇ ಪಟ್ಟಿಯಲ್ಲಿರುವ 53 ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ 834, 1018, 1028, 1054, 496, 327, 707, 862, 938, 939, 719, 7 ಮತ್ತು 855 ಪ್ರಶ್ನೆಯನ್ನು ಹೊರತು ಪಡಿಸಿ, ಇನ್ನುಳಿದ 40 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬುಕ್ಕಾಪಟ್ಟಣದಲ್ಲಿರುವ ಶ್ರೀ ಗಜಾನನ ರೂರಲ್ ಹೈಸ್ಕೂಲು ಸರ್ಕಾರದ ವಶ

274 (710) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಶಿರಾ ತಾಲ್ಲೂಕ್ ಬುಕ್ಕಾಪಟ್ಟಣದಲ್ಲಿ ಖಾಸಗಿ ಸಂಸ್ಥೆಯಾದ ಶ್ರೀ ಗಜಾನನ ರೂರಲ್ ಹೈಸ್ಕೂಲ್‌ನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಕ್ಷೇತ್ರದ ಶಾಸಕರು ಸಾರ್ವಜನಿಕರು ಹಾಗೂ ಸಂಸ್ಥೆಯ ಆಡಳಿತ ಮಂಡಳಿಯಿಂದ ಮನವಿಗಳು ಬಂದಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಸರ್ಕಾರ ಆಡಳಿತ ಮತ್ತು ಶಿಕ್ಷಣದ ದೃಷ್ಟಿಯಿಂದ ಅದನ್ನು ವಹಿಸಿಕೊಳ್ಳಲು ಕ್ರಮ ಕೈಗೊಳ್ಳುವುದೇ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–